(ಯುವಕರ ಪ್ರಶ್ನೆಗಳಿಗೆ ಮಾನ್ಯ ರಾಷ್ಟ್ರಪತಿಗಳು ನೀಡಿದ ಉತ್ತರಗಳು –ಭಾಗ 3)

# ? ಕೇಳಿ ತಿಳಿಯಿರಿ ☆

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

? ಹೋದ ಬಾರಿ ನೀವು ಪೋರ್‌ಬಂದರಿಗೆ ಬಂದಿದ್ದಾಗ "ಕಲ್ಪನೆಯೇ ಅತ್ಯುತ್ತಮ ಶಕ್ತಿ" ಎಂದಿದ್ದಿರಿ. ಅದು ನಿಜವಾದರೆ ಭ್ರಷ್ಟಾಚಾರ, ಬಡತನ, ಪ್ರಭಾವಿ ವ್ಯಕ್ತಿಗಳ ಅಸಹಕಾರಗಳ ವಿರುದ್ಧ ಇಂದಿನ ವಿದ್ಯಾರ್ಥಿಯು ತನ್ನ ಕನಸುಗಳನ್ನು ಹೇಗೆ ನನಸಾಗಿಸಿಕೊಳ್ಳಬಹುದು?

☆ **ಹೆಲೆನ್ ಕೆಲರ್ ಕುರುಡಿಯಾಗಿದ್ದಳು; ತನ್ನ ಮುಂದಿದ್ದ ಜಗತ್ತನ್ನು ಕಾಣುವುದು ಅವಳಿಗೆ ಅಸಾಧ್ಯವಾಗಿತ್ತು. ಕಟಕ್‌ನಲ್ಲಿ ಒಬ್ಬ ಮಹಿಳಾ ಶಿಕ್ಷಕಿಯನ್ನು ನಾನು ಭೇಟಿಯಾಗಿದ್ದೆ. ಆಕೆ ಅಂಗವಿಕಲಳಾಗಿದ್ದೂ ಕೂಡ ಸಮಾಜಕ್ಕಾಗಿ ದುಡಿಯಬೇಕೆಂಬ ತೀವ್ರ ಆಸಕ್ತಿಯನ್ನು ಹೊಂದಿದ್ದಳು. ಸಮಸ್ಯೆಗಳಿಂದ ನಮ್ಮ ಮನಸ್ಸನ್ನು ಕುಂಠಿತಗೊಳಿಸದಿರುವುದೇ ಬಹಳ ಮುಖ್ಯ. ಅದೇ ಬೇಕಾಗಿರುವ ಉಪಾಯ.**

? ಭಾರತವು ಪ್ರತಿಭಾ ಪಲಾಯನದಿಂದಾಗಿ ತನ್ನ ಯುವ ಶಕ್ತಿಯನ್ನು ಸತತವಾಗಿ ಕಳೆದುಕೊಳ್ಳುತ್ತಿದೆ. ನಿಮ್ಮ ಪ್ರಕಾರ ಇದನ್ನು ತಡೆಗಟ್ಟಲು ಯಾವ ಕ್ರಮಗಳನ್ನು ಕೈಗೊಳ್ಳಬೇಕು?

☆ **ಈ ಮಾತನ್ನು ನಾನು ಒಪ್ಪುವುದಿಲ್ಲ.**

? ಮಹಾತ್ಮಾ ಗಾಂಧಿಯವರ ಈ ಊರು ನಿಮಗೆ ಹೇಗೆನಿಸುತ್ತದೆ?

☆ **ನಾನಿಲ್ಲಿರುವಾಗ ಮಹಾತ್ಮರ ಬಾಲ್ಯದ ದಿನಗಳು ಹಾಗೂ ಅವರ ಎಲ್ಲ ಅದ್ಭುತ ಕ್ರಿಯೆಗಳನ್ನು ನೆನಪಿಸಿಕೊಳ್ಳುತ್ತೇನೆ. ಬುದ್ಧನ ಜಾಗದಲ್ಲಿದ್ದಾಗ ಅವನ ಉದಾತ್ತ ಗುಣಗಳು, ಮಾನವಾನುಕಂಪೆಯ ಕ್ರಿಯೆಗಳು ನೆನಪಾಗುತ್ತವೆ. ಅಸಾಧಾರಣವಾದ ಒಬ್ಬ ಮಹಿಮಾನ್ವಿತನು ಓಡಾಡಿದ ಪವಿತ್ರ ಸ್ಥಳ ಇದು.**

? ಮನೆಯ ಒಳಗಡೆ ಮತ್ತು ಹೊರಗಡೆ ಹೆಂಗಸರ ಮೇಲಿನ ದೌರ್ಜನ್ಯ ಹೆಚ್ಚುತ್ತಲೇ ಇವೆ. ಇವನ್ನು ತಡೆಗಟ್ಟಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ?

☆ **ನ್ಯಾಯಾಂಗವು ತನ್ನ ಶಾಸನಗಳ ಮೂಲಕ ಕ್ರಮ ತೆಗೆದುಕೊಳ್ಳುತ್ತಿದೆ. ಇದರೊಂದಿಗೆ ತಾಯಿತಂದೆಯರೂ ತಮ್ಮ ಮಕ್ಕಳ ರಕ್ಷಣೆಯ ಬಗ್ಗೆ ಹೆಚ್ಚು ಗಮನ ಕೊಡಬೇಕು.**

? ಆಧ್ಯಾತ್ಮಿಕ ಜೀವನವನ್ನು ವೃದ್ಧಾಪ್ಯದಲ್ಲಿ ಅಭ್ಯಾಸ ಮಾಡಬೇಕು ಎಂದು ಅನೇಕ ವಿದ್ಯಾರ್ಥಿಗಳು ಹೇಳುತ್ತಾರೆ. ಆದರೆ ಸ್ವಾಮಿ ವಿವೇಕಾನಂದರು ಬಾಲ್ಯದಿಂದಲೇ ಆಧ್ಯಾತ್ಮಿಕವಾಗಿರಬೇಕು ಎಂದು ತಿಳಿಸಿದ್ದಾರೆ. ನಿಮ್ಮ ಅಭಿಪ್ರಾಯವೇನು?

☆ **ಆಧ್ಯಾತ್ಮಿಕ ಜೀವನಕ್ಕೆ ಪ್ರವೇಶ ಪಡೆಯಲು ವಯೋಮಿತಿಯಿಲ್ಲ.**

? ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ದೇಶದ ಎಲ್ಲ ಶಾಲಾಕಾಲೇಜುಗಳಲ್ಲೂ ಆಚರಿಸುವಂತಾಗಬೇಕು ಎಂಬುದು ಅನೇಕ ವಿದ್ಯಾರ್ಥಿಗಳ ಅಭಿಪ್ರಾಯ. ನಿಮ್ಮ ಅನಿಸಿಕೆಯೇನು?

☆ **ಕೇವಲ ಒಂದೇ ಒಂದು ದಿನ ಸ್ವಾಮಿ ವಿವೇಕಾನಂದರ ಕುರಿತು ಆಲೋಚಿಸುವುದಕ್ಕಿಂತ ಪ್ರತಿನಿತ್ಯವೂ ಅವರನ್ನು ಕುರಿತು ಭಾವಿಸುವ ಅಭ್ಯಾಸವನ್ನು ನಾವು ರೂಢಿಸಿಕೊಳ್ಳಬೇಕು.**

? ಸ್ವಾಮಿ ವಿವೇಕಾನಂದರ ಜೀವನ ನಿಮ್ಮನ್ನು ಯಾವ ರೀತಿ ಪ್ರೇರೇಪಿಸಿತು?

☆ **ಅವರ ದೂರದರ್ಶಿತ್ವ, ಪ್ರಭಾವಶಾಲಿ ಆಲೋಚನೆಗಳು ನನ್ನ ಪ್ರೇರಣೆ.**

? ವಿದ್ಯಾಭ್ಯಾಸದ ಮೂಲ ಗುರಿ ಯಾವುದು?

☆ **ಚಾರಿತ್ರ್ಯನಿರ್ಮಾಣ. ಶಿಕ್ಷಣವು ಮನುಷ್ಯನಿಗೆ ಆಲೋಚಿಸುವ ಸಾಮರ್ಥ್ಯವನ್ನು ನೀಡುತ್ತದೆ. ಆಲೋಚಿಸಿದಾಗ ಜ್ಞಾನ ಹೊರಹೊಮ್ಮುತ್ತದೆ. ಅಂಥ ಜ್ಞಾನವು ಮನುಷ್ಯನನ್ನು ಉತ್ತಮನನ್ನಾಗಿಸುತ್ತದೆ.**

? ಪ್ರಾಮಾಣಿಕರಾದ ನಿಮಗೆ ಇಂದಿನ ಭ್ರಷ್ಟಾಚಾರದ ರಾಜಕೀಯದ ನಡುವೆ ಕೆಲಸ ಮಾಡುವಾಗ ಹೇಗೆನಿಸುತ್ತದೆ?

☆ **ಇತರರು ಎಂತಹವರು ಎಂದು ನಾವು ಚಿಂತಿಸಬಾರದು. ನಾವು ಸರಿಯಾಗಿ, ನಿಷ್ಠೆಯಿಂದ, ನಮ್ಮ ಅಂತಃಸಾಕ್ಷಿಗೆ ಒಪ್ಪುವಂತೆ ದುಡಿಯಬೇಕು.**

? ನಿಮ್ಮ *Ignited Minds*—(ಎಚ್ಚೆತ್ತ ಮನಸ್ಸುಗಳು) ಪುಸ್ತಕದಲ್ಲಿ ಪೋರ್‌ಬಂದರ್‌ನಲ್ಲಿರುವ ಸ್ವಾಮಿ ವಿವೇಕಾನಂದರ ಕೋಣೆಯಲ್ಲಿ ಧ್ಯಾನ ಮಾಡಿದ ಬಗ್ಗೆ ಬರೆದಿದ್ದೀರಿ. ಧ್ಯಾನದ ಸಮಯದಲ್ಲಿ ನಿಮಗೆ ಏನು ಅನಿಸಿತು?

☆ **ನಮ್ಮ ಜನರು ಭಯದಿಂದ ಮುಕ್ತರಾಗಲಿ, ಅಂತಹ ಶಕ್ತಿ ಅವರಿಗೆ ಬರಲಿ ಎಂದು ದೇವರಲ್ಲಿ ಪ್ರಾರ್ಥಿಸಿದೆ.**

? ಸತ್ಯವನ್ನೇ ನುಡಿಯಬೇಕು, ಪಾಲಿಸಬೇಕು ಎಂದು ಧಾರ್ಮಿಕ ಗ್ರಂಥಗಳು ಹೇಳುತ್ತವೆ. ಸತ್ಯವೇ ದೇವರು ಎಂದು ಗಾಂಧೀಜಿಯೂ ಹೇಳಿದ್ದಾರೆ. ಆದರೆ ಜೀವನದಲ್ಲಿ ಯಶಸ್ವಿಯಾಗಲು ವಾಸ್ತವಿಕವಾಗಿರಬೇಕು—ಅಂದರೆ ಸುಳ್ಳನ್ನು ಹೇಳುತ್ತ, ಮೌಲ್ಯಗಳೊಡನೆ ರಾಜಿ ಮಾಡಿಕೊಳ್ಳಬೇಕು—

ಎನ್ನುತ್ತಾರೆ, ಕೆಲವು ಹಿರಿಯರು. ನಾವು ಸತ್ಯವಂತರಾಗಿರಬೇಕೋ, ವ್ಯಾವಹಾರಿಕರಾಗಿರಬೇಕೋ ಎಂದು ತಿಳಿಯದಾಗಿದೆ. ಮಾರ್ಗದರ್ಶನ ಮಾಡುತ್ತೀರಾ?

☆ **ನೀವು ಸದಾ ಕಾಲವೂ ಸತ್ಯವನ್ನೇ ಅನುಸರಿಸಬೇಕು.**

? ಸಂಸ್ಕೃತವನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ರಾಷ್ಟ್ರಕ್ಕೆ ಹೇಗೆ ಸೇವೆ ಸಲ್ಲಿಸಬಹುದು?

☆ **ವಿಜ್ಞಾನ, ವೈದ್ಯಶಾಸ್ತ್ರ, ತತ್ತ್ವಶಾಸ್ತ್ರಗಳಿಗೆ ಸಂಬಂಧಿಸಿದ ಸಂಸ್ಕೃತದಲ್ಲಿರುವ ಜ್ಞಾನಭಂಡಾರವನ್ನು ಅನುವಾದಿಸಿ ಕಾರ್ಯರೂಪಕ್ಕೆ ತರುವ ಮೂಲಕ.**

? ಭಗವಂತ ನಿಮಗೆ ಮೂರು ವರಗಳನ್ನು ಕೇಳುವ ಅವಕಾಶ ನೀಡಿದರೆ, ನೀವೇನು ಕೇಳುವಿರಿ?

☆ **ಯಾವುದೇ ಸಮಸ್ಯೆಯನ್ನು ಎದುರಿಸಿ, ಯಶಸ್ವಿಯಾಗುವ ಛಲ ಮತ್ತು ಶಕ್ತಿಯನ್ನು ನಮ್ಮ ದೇಶದವರಿಗೆ ನೀಡು ಎಂಬುದು ಮೊದಲನೆಯದು. ಭ್ರಷ್ಟಾಚಾರರಹಿತ ವ್ಯಕ್ತಿಗಳ ಸಂಖ್ಯೆ ಹೆಚ್ಚಲಿ ಎಂಬುದು ಎರಡನೆಯದು. ಇತರರಿಗೆ ಸಹಾಯ ಮಾಡುವಂತಹ ಒಳ್ಳೆಯ ಮನಸ್ಸನ್ನು, ಚಾರಿತ್ರ್ಯವನ್ನು ಎಲ್ಲರಿಗೂ ದಯಪಾಲಿಸು ಎಂಬುದು ಮೂರನೆಯದು.**

✪

## ಪ್ರಹಸನ ಪ್ರಸಂಗ

ಹತ್ತು ವರ್ಷದ ಬಾಲಕ ಅಜ್ಜಿಗೆ ಫೋನ್ ಮಾಡಿದ, "ಅಜ್ಜಿ, ನಾನು ಮತ್ತು ನನ್ನ ಸ್ನೇಹಿತ ಈ ಭಾನುವಾರ ನಿನ್ನಲ್ಲಿಗೆ ಬಂದು ಉಳಿಯಬಹುದೇ?" "ಈ ವಾರ ಬೇಡಪ್ಪ, ನನಗೆ ಬಹಳ ವಯಸ್ಸಾಗಿದೆ," ಎಂದಳು ಅಜ್ಜಿ. ಬಾಲಕ ಬಿಡಲಿಲ್ಲ, "ಅಲ್ಲ ಅಜ್ಜಿ, ಮುಂದಿನ ವಾರದ ಹೊತ್ತಿಗೆ ಇನ್ನೂ ವಯಸ್ಸಾಗಿರುತ್ತೆ!"

✳ ✳ ✳

ಐದು ವರ್ಷದ ಮೊಮ್ಮಗಳು ಅಜ್ಜಿಯ ಮನೆಗೆ ಬಂದಿದ್ದಳು. ಅಜ್ಜಿಯ ಬಳಿಯಿದ್ದ ಒಂದು ಹಳೆಯ ಕಾಲದ ತೂಗಾಡುವ ಕುರ್ಚಿಯನ್ನು ನೋಡಿ ಅವಳಿಗೆ ಆಸೆಯಾಯಿತು. "ಅಜ್ಜಿ, ಇದನ್ನು ನನಗೆ ಕೊಡುತ್ತೀಯಾ?" ಎಂದು ಕೇಳಿದಳು. "ನಾನು ತೀರಿಕೊಂಡ ನಂತರ ನೀನು ತೆಗೆದುಕೊಳ್ಳಬಹುದು" ಎಂದಳು ಅಜ್ಜಿ. "ಛೆ! ಛೆ! ನೀನು ಸಾಯುವುದು ನನಗೆ ಇಷ್ಟವಿಲ್ಲ" ಎಂದಳು ಬಾಲಕಿ. ಕೆಲವು ನಿಮಿಷಗಳ ನಂತರ ಮತ್ತೆ ಕೇಳಿದಳು, "ಅಜ್ಜಿ, ಸರಿ ಹಾಗಾದರೆ, ನಿನ್ನನ್ನು ಹೂತುಹಾಕಿದ ಮೇಲೆ ಹಿಂದಿರುಗುವಾಗ ನಾನು ಕೊಂಡೊಯ್ಯಬಹುದೇ?"

✳ ✳ ✳

ತಾಯಿಯು ನಾಲ್ಕು ವರ್ಷದ ಮಗನಿಗೆ ಪ್ರಾರ್ಥನೆಯ ಬಗ್ಗೆ ಹೇಳುತ್ತಿದ್ದಳು. ರಾತ್ರಿ ಮಲಗುವ ಮುನ್ನ ಪ್ರಾರ್ಥನೆ ಮಾಡಬೇಕು, ಪ್ರಾರ್ಥನೆಯೆಂದರೆ ಹೇಗಿರಬೇಕು ಇತ್ಯಾದಿ ಇತ್ಯಾದಿ. ಈ ಉದ್ದದ ಭಾಷಣವನ್ನು ಕೇಳಿಯಾದ ಮೇಲೆ ಮಗ ಕೇಳಿದ, "ಅಂದರೆ, ಅಲ್ಲಿ ಅಷ್ಟು ಮೇಲಿದ್ದರೂ ಆ ದೇವರಿಗೆ ನಾವು ಹೇಳುವ ಪ್ರಾರ್ಥನೆ ಕೇಳಿಸುತ್ತದೆಯೇ?" ತಾಯಿ, "ಹೌದು, ಕೇಳಿಸುತ್ತದೆ" ಎಂದಳು. ಮಗ ದೊಡ್ಡ ಕಣ್ಣು ಮಾಡಿಕೊಂಡು ಹೇಳಿದ, "ಅಬ್ಬಾ! ಅವನ ಕಿವಿ ಎಷ್ಟು ಚುರುಕಾಗಿರಬೇಕು!"

✳ ✳ ✳

ಹಳೆಯ ಬಂಗಲೆಯನ್ನು ನೋಡಲು ಪ್ರವಾಸಿಗಳ ತಂಡವೊಂದು ಬಂದಿತ್ತು. ವಿಶಾಲವಾದ ಬಂಗಲೆಯ ಪಾಳುಬಿದ್ದ ಕೋಣೆಗಳು, ತೋಟಗಳನ್ನೆಲ್ಲ ನೋಡಿಯಾದ ಮೇಲೆ ಆ ತಂಡದಲ್ಲಿದ್ದ ಯುವತಿಯೊಬ್ಬಳನ್ನು ಗೈಡ್ ಕೇಳಿದ, "ಹೇಗೆನಿಸಿತು?" "ಓಹೋ! ಬಹಳ ಸೊಗಸಾಗಿದೆ. ಆದರೆ ಎಲ್ಲಾದರೂ ಕತ್ತಲೆಯ ಕೋಣೆಯ ಮೂಲೆಯಿಂದ ಭೂತ ಗೀತ ಬಂದೀತೆಂದು ಭಯಪಡುತ್ತಿದ್ದೆ" ಎಂದಳವಳು. "ಛೆ! ಇಲ್ಲ. ನಾನು ಇಷ್ಟು ಕಾಲ ಇಲ್ಲೇ ವಾಸವಾಗಿದ್ದೀನಿ. ಅಂಥದ್ದೇನೂ ಭಯವಿಲ್ಲ," ಎಂದ ಗೈಡ್. "ಎಷ್ಟು ವರ್ಷಗಳಿಂದ ಇಲ್ಲಿರುವೆ?" ಎಂದು ಪ್ರಶ್ನಿಸಿದಾಗ ಬಂದ ಉತ್ತರ, "ಸುಮಾರು ಮುನ್ನೂರು ವರ್ಷಗಳಿಂದ!"

✳ ✳ ✳

ಒಬ್ಬ ಯುವಕ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿದ. ಅಂಗಡಿಯ ಮಾಲೀಕ ಮಾರಾಟದ ನಿಯಮಗಳನ್ನು ಯುವಕನಿಗೆ ತಿಳಿಸಿಕೊಡುತ್ತ ಹೇಳಿದ, "ನೋಡಯ್ಯಾ, ಮರೆಯಬೇಡ. ಯಾವಾಗಲೂ ಗಿರಾಕಿಯೇ ಮುಖ್ಯ. ಅವರೊಂದಿಗೆ ವಾದ ಮಾಡಬೇಡ. ಅವರು ಹೇಳಿದ್ದಕ್ಕೆಲ್ಲ ಹೌದು ಎನ್ನಬೇಕು."

ಗಿರಾಕಿಗಳು ಅಂಗಡಿಗೆ ಬಂದು ಏನನ್ನೂ ಕೊಂಡುಕೊಳ್ಳದೆ ಹೋಗುತ್ತಿರುವುದನ್ನು ಕೆಲವೇ ದಿನಗಳಲ್ಲಿ ಗಮನಿಸಿದ ಮಾಲೀಕ ಯುವಕನನ್ನು ಕರೆದು ಕೇಳಿದ, "ಏನಯ್ಯಾ? ಯಾರೂ ಏನನ್ನೂ ಕೊಂಡುಕೊಳ್ಳುತ್ತಿಲ್ಲವಲ್ಲಾ?" ಯುವಕ ಮುಚ್ಚುಮರೆಯಿಲ್ಲದೆ ಹೇಳಿದ, "ಸರ್, ಅವರೆಲ್ಲ ಬಂದು ಬೆಲೆ ಬಹಳ ಜಾಸ್ತಿ ಅಲ್ಲವೇ ಎನ್ನುತ್ತಾರೆ. ನಾನು ನಿಮ್ಮ ಆದೇಶದಂತೆ 'ಹೌದು' ಎನ್ನುತ್ತೇನೆ!"

✳ ✳ ✳

✪